ಡೈರಿನಲ್ಲಿ ಬಂಧಿಸಿದ್ದೇವೆ ಎಂದು ಎಂಟರ್ ಮಾಡಿ, ಮ್ಯಾಜಿಸ್ಟ್ರೇಟ್ ಮುಂದೆ ಪ್ರೊಡ್ಯೂಸ್ ಮಾಡುದ್ರೆ ಆಯಿತು'.

ಮಾಯಣ್ಣ ಇದಿಷ್ಟೂ ಪುರಾಣವನ್ನು, ಮುರುಗನ್ ಮತ್ತು ವೇಲು ಬಂಧನದವರೆಗಿನ ತನಕ, ಮಾರನೇ ದಿನ ಬೆಳಿಗ್ಗೆ ಹತ್ತು ಗಂಟೆಗೆ ಠಾಣೆಗೆ ಬಂದ ಎಸ್.ಪಿ. ಸಾಹೇಬರಿಗೆ, ಸ್ಥೂಲವಾಗಿ ವಿವರಿಸಿದ್ದ. ಅನಾವರಣಗೊಂಡ ಸಾಲು ಸಾಲು ಅಪರಾಧಗಳ ಬಗ್ಗೆ ಅಚ್ಚರಿಗೊಂಡು ಇಡೀ ತನಿಖೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು ಎಸ್‌ಪಿ ಸಾಹೇಬರು. ಮಾಯಣ್ಣನ ಪ್ರಚಂಡ ಸಾಹಸ ಹಾಗೂ ಮುನ್ನುಗ್ಗುವ ಪ್ರವೃತ್ತಿಯನ್ನು ಪ್ರಶಂಸಿಸಿ, ಅಮ್ಮುವಿನ ಕೊಲೆಯ ತನಿಖೆ ಇಷ್ಟೊಂದು ಗಂಭೀರ ಅಪರಾಧಗಳನ್ನು ಜೊತೆ ಜೊತೆಗೇ ಬಯಲಿಗೆಳೆದು ಬಗೆಹರಿಸಿದ್ದನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದರು.

19

ಹತ್ತು ದಿನಗಳಿಂದ ನಿರಂತರ ಒತ್ತಡದಲ್ಲಿದ್ದ ಮಾಯಣ್ಣ ಮೊದಲ ಬಾರಿ ನಿರಾಳವಾಗಿ ಕಾಲು ಚಾಚಿ ಕುಳಿತಿದ್ದ. ಆದರೆ ಮಾಡದೇ ಉಳಿಸಿದ್ದ ಒಂದು ಕೆಲಸವಿತ್ತು. 'ಭುಜಂಗ, ಆ ರವಿ ಮತ್ತು ವಿನೋದನನ್ನು ಕಳಿಸಿ'.

ಸ್ವಲ್ಪ ಹೊತ್ತಿನಲ್ಲಿ ಒಳಗೆ ಬಂದ ಇಬ್ಬರನ್ನು ಕುರಿತು, 'ನಿಮಗೆ ಮಾದಕ ವಸ್ತು ಉತ್ಪಾದನೆ, ಸಾಗಾಣಿಕೆ, ಮತ್ತು ಮಾರಾಟ ಅಪರಾಧಗಳಿಗಾಗಿ, ಜೊತೆಗೆ ಕರ್ತವ್ಯನಿರತ ಪೊಲೀಸು ಅಧಿಕಾರಿಯ ಮೇಲೆ ಹಲ್ಲೆ ಮತ್ತು ಫೋರ್ಜರಿ ಅಪರಾಧಗಳಿಗಾಗಿ ಶಿಕ್ಷೆಯಾಗುವುದು ಖಚಿತ. ಶಿಕ್ಷೆಯನ್ನು ಪ್ರಾಯಶ್ಚಿತ್ತ ಎಂದು ತಿಳಿದು ಮುಂದಾದರೂ ಗೌರವಯುತವಾಗಿ ಬದುಕಿ... ಹೊರಡಿ'.

ತಲೆಕೆಳಗಾಕಿನಿಂತ ಅವರನ್ನು ಒಳಗೆಳೆದುಕೊಂಡು ಹೋಗಿ ಕೂಡಿದ್ದ ಭುಜಂಗ, 'ಸರ್, ಚಂದ್ರನ್ ನಿಮ್ಮ ಜೊತೆ ಮಾತನಾಡಬೇಕೆಂದು ಹೊರಗೆ ಕಾದು ಕೂತಿದ್ದಾರೆ'.

'ಒಳಗೆ ಕಳಿಸಿ ಭುಜಂಗ...'

ಒಳ ಬಂದ ಚಂದ್ರನ್‌ಗೆ ಕುರ್ಚಿ ತೋರಿಸಿ 'ಚಂದ್ರನ್, ನಮ್ಮನ್ನು ಕ್ಷಮಿಸಿ. ವಿನಾಕಾರಣ ನಿಮ್ಮ ಮೇಲೆ ಸಂಶಯಪಟ್ಟು ನಿಮ್ಮ ಮನಸ್ಸಿಗೆ ಗಾಸಿ ಮಾಡಿದ್ದೇವೆ'.

'ಅದು ಪರವಾಗಿಲ್ಲ ಸರ್. ನಿಮ್ಮ ಕರ್ತವ್ಯ ನೀವು ಮಾಡಿದ್ದೀರಾ. ಆದರೆ ನಾನು ಈಗ ಬಂದಿರುವುದು ಬೇರೊಂದು ವಿಷಯ ನೇರವಾಗಿ ಮಾತನಾಡುವುದಕ್ಕೆ'.

'ಏನದು ಚಂದ್ರನ್...?'

'ನಮ್ಮ ಅಮ್ಮು ಕೊಲೆಯ ಅಪರಾಧಿಗಳಿಗೆ ಸರಿಯಾದ ಶಿಕ್ಷೆಯಾಗದಿದ್ದರೆ ನಾನೇ ಅವರಿಗೆ ಶಿಕ್ಷೆಯನ್ನು ಕೊಡಬೇಕಾಗುತ್ತದೆ. ಮಿಕ್ಕಿದ ಪರಿಣಾಮಗಳ ಬಗ್ಗೆ ನಾನು ಯೋಚನೆ ಮಾಡುವುದಿಲ್ಲ. ನೀವು ಏನು ಬೇಕಾದರೂ ಮಾಡಬಹುದು...'

ಮಾತು ಮುಗಿಸಿ ಕೈಮುಗಿದು ಹೊರಟೇ ಬಿಟ್ಟ ಚಂದ್ರನ್. ಅವನ ಮೇಲಧಿಕಾರಿಯ ಕುಟುಂಬದ ಬಗ್ಗೆ ಅವನ ಎದೆಯಲ್ಲಿದ್ದ ನಿಷ್ಠೆ ಮಾತಾಗಿ ಬಂದಿತ್ತು. ಅದರಲ್ಲಿ ಯಾವ ಭಾವಾತಿರೇಕವೂ ಇರಲಿಲ್ಲ, ಬದಲಿಗೆ ಖಾಚಿತ್ಯವಿತ್ತು. ನಂತರ ಮಾಯಣ್ಣ, ಜಯಂತನಿಗೆ ಫೋನ್ ಮಾಡಿ, 'ಜಯಂತ್, ನಾವು ನಮ್ಮ ತನಿಖಾ ಪ್ರಕ್ರಿಯೆಯಲ್ಲಿ, ಮೊದಲೇ ನೊಂದಿದ್ದ ನಿಮಗೆ ಮತ್ತಷ್ಟು ನೋವು ಮಾಡಿದ್ದೇವೆ, ಕ್ಷಮಿಸಿ...'

'ಐ ಕೆನ್ ಅಂಡರ್‌ಸ್ಟ್ಯಾಂಡ್ ದಟ್... ಇರಲಿ ಬಿಡಿ...'

'ಆದರೆ ನಾನು ನಿಮಗೆ ಇನ್ನೊಂದು ವಿಷಯ ಹೇಳಬಹುದೇನೊ'

'ಹೇಳಿ...'

'ಸೋತು ಸೊರಗಿದ್ದ ನಿಮಗೆ ಅಮೃತವಾಗಿ ಬಂದಿದ್ದ ಅಮ್ಮುವನ್ನು ಅನುಮಾನಿಸಿ ಅವಮಾನಿಸಿ... ಮುರುಗನ್, ದಿನೇಶ್, ಜಾಹ್ನವಿಯಂತವರ ಮಾತು, ಮೋಸ, ಷಡ್ಯಂತ್ರಗಳಿಗೆ ಈಡಾದಿರಿ. ಮುಂದಕ್ಕಾದರೂ ನಿಮ್ಮ ವಿವೇಚನೆ ವಿವಶವಾಗದಿರಲಿ...'

'ನಿಮ್ಮ ಮಾತು ನಿಜ' – ಭಾವೋದ್ವೇಗದಿಂದ ಬಾಯಿಕಟ್ಟಿ ಮುಂದಕ್ಕೆ ಮಾತು ಹೊರಡದಂತಾಗಿತ್ತೇನೊ...

ಆ ತುದಿ ಸಂಪೂರ್ಣವಾಗಿ ಮೌನವಾಗಿ ಹೋಗಿತ್ತು. ಮಾಯಣ್ಣನೂ ಮುಂದುವರಿಸದೆ ಸುಮ್ಮನಾದ.

ಜಯಂತನ ಕರೆ ಮುಗಿಸುತ್ತಿದ್ದಂತೆಯೇ, ಮಾಯಣ್ಣನ ಫೋನ್ ಜೋರಾಗಿ ರಿಂಗಣಿಸುತ್ತಿತ್ತು, ಜಾಹ್ನವಿಯಿಂದ. ಆದರೆ ಮಾಯಣ್ಣನಿಗೆ ಮತ್ತೊಂದು ಕರೆ ಮಾಡುವುದಿತ್ತು, ಸೌಜನ್ಯಕ್ಕೆ.

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in

**ಹೊಸ ಧಾರಾವಾಹಿ**



# ಹೊಸಬೆಳಗು

**ಇಲ್ಲಿರಲಾರೆ ಎಂದು ಅಲ್ಲಿಗೆ ಹೋಗಿ...**

ಹೆಣ್ಣು ಮಕ್ಕಳ ಕಲರವದಿಂದ ತುಂಬಿಹೋಗಿದ್ದ ಮನೆಯಲ್ಲಿ ಗಂಡು ಮಗನೊಬ್ಬ ಜನಿಸಿದಾಗ ಆ ಮಗು ರಾಜಕುಮಾರನಂತೆ ಕಂಗೊಳಿಸುವುದು ಸಹಜವಷ್ಟೆ. ವಾರಿಜಾಳಿಗೆ ಪುತ್ರೋತ್ಸವವಾದಾಗಲೂ ಮನೆಯಲ್ಲಿ ಸಂಭ್ರಮ ಉಕ್ಕಿಹರಿಯಿತು. ಆದರೆ, ಎಲ್ಲರ ಕಣ್ಣಿನ ಬೆಳಕಿನಂತಿದ್ದ ಆ ಹುಡುಗ ಹುಡುಗಿಯರ ಬಟ್ಟೆ ತೊಟ್ಟು ಸಂಭ್ರಮಿಸುವುದನ್ನು ಕಂಡು ತಾಯಿಯ ಹೃದಯ ಒಡ್ಡಾಡಿಹೋಯಿತು. ಮಗನನ್ನು ಹುಡುಗನಂತೆ ಬೆಳೆಸುವ ತಾಯಿಯ ಪ್ರಯತ್ನಗಳೊಂದೂ ಫಲ ಕೊಡದೆ ಹೋದವು. ಆ ಹುಡುಗ ಮುಂದೆ ಏನಾದ? 'ಇಲ್ಲಿರಲಾರೆ' ಎಂದು ಪರಿತಪಿಸುತ್ತ, ಅಲ್ಲಿಗೆ ಹೋದವರ ಪಾಡು ಏನಾಯಿತು?

ಓದುಗರನ್ನು ಹೊಸ ಭಾವಜಗತ್ತಿಗೆ ಕರೆದೊಯ್ಯುವ **ಎನ್. ಶೈಲಜಾ ಹಾಸನ** ಅವರ ವಿಶಿಷ್ಟ ಕಾದಂಬರಿ.

**ಮುಂದಿನ ಸಂಚಿಕೆಯಿಂದ ಆರಂಭ**